---

೧೨೮ **b**

ಜಯ ಜಯ ಜಗತ್ರಾಣ ಜಗದೊಳಗೆ ಸುತ್ರಾಣ

ಅಖಿಲ ಗುಣಸದ್ಧಾಮ ಮಧ್ವನಾಮ | ಪ |

ಆವ ಕಚ್ಚಪರೂಪದಿಂದಲ್ಯಂಡೋಕದಿ

ಓವಿ ಧರಿಸಿದ ಶೇಷಮೂರುತಿಯನು

ಆವನ ಬಳಿಪಡಿದು ಹರಿಯ ಸುರರೈದುವರು

ಆ ವಾಯು ನಮ್ಮ ಕುಲ ಗುರುರಾಯನು | ೧ |

ಆವಾತನು ದೇಹದಿರೆ ಹರಿಯು ತಾ ನೆಲೆಸಿರುವ

ಆವಾತನು ತೊಲಗೆ ಹರಿ ತಾ ತೊಲಗುವ

ಆವಾತನು ದೇಹದೊಳ ಹೊರಗೆ ನಿಯಾಮಕನು

ಆ ವಾಯು ನಮ್ಮ ಕುಲ ಗುರುರಾಯನು | ೨ |

ಕರಣಾಭಿಮಾನಿ ದಿವಿಜರು ದೇಹವನು ಬಿಡಲು

ಕುರುಡ ಕಿವುಡನು ಮೂಕನೆಂದೆನಿಸುವ

ಪರಮ ಮುಖ್ಯಪ್ರಾಣ ತೊಲಗಲಾದೇಹವನು

ಅರಿತು ಪೆಣನೆಂದು ಪೇಳ್ವರು ಬುಧಜನಾ | ೩ |

ಸುರರೊಳಗೆ ನರರೊಳಗೆ ಸರ್ವ ಭೂತಗಳೊಳಗೆ

ಪರತರನೆನಿಸಿ ನೇಮದಿ ನೆಲೆಸಿಹ

ಹರಿಯನಲ್ಲದೆ ಬಗೆಯ ಅನ್ಯರನು ಲೋಕದೊಳು

ಗುರುಕುಲತಿಲಕ ಮುಖ್ಯ ಪವಮಾನನು | ೪ |

ತ್ರೇತೋಯಲಿ ರಘುಪತಿಯ ಸೇವೆ ಮಾಡುವೆನೆಂದು

ವಾತಸುತ ಹನುಮಂತನೆಂದೆನಿಸಿದ

ಪೋತ ಭಾವದಿ ತರಣಿಬಿಂಬಕ್ಕೆ ಲಂಘಿಸಿದ

ಈತಗೆಣೆ ಯಾರು ಮೂರ್ಲೋಕದೊಳಗೆ | ೫ |

ತರಣಿಗಭಿಮುಖನಾಗಿ ಶಬ್ದಶಾಸ್ತ್ರವ ಪಠಿಸಿ

ಉರವಣಿಸಿ ಹಿಂದೆ ಮುಂದಾಗಿ ನಡೆದ

ಪರಮ ಪವಮಾನಸುತ ಉದಯಾಸ್ತಶೈಲಗಳ

ಭರದಿ ಐದಿದ ಈತಗುಪಮೆಯುಂಟೆ | ೬ |

ಅಖಿಲ ವೇದಗಳ ಸಾರವ ಮುನ ತಾ

ನಿಖಿಳ ವ್ಯಾಕರಣ ಶಾಸ್ತ್ರವನು ಪೇಳೆ

ಮುಖದಲ್ಲಿ ಕಿಂಚದಪಶಬ್ದ ಇವಗಿಲ್ಲೆಂದು

ಮುಖ್ಯಪ್ರಾಣನನು ರಾಮನನುಕರಿಸಿದ | ೭ |

ತರಣಿಸುತನು ಕಾಯ್ದು ಶರದಿಯನು ನೆರೆ ದಾಟಿ

ಧರಣಿಸುತೆಯಳ ಕಂಡು ದನುಜರೊಡನೆ

ಭರದಿ ರಣವನು ಮಾಡಿ ಗೆಲಿದು ದಿವ್ಯಾಸ್ತ್ರಗಳ

ಉರುಹಿ ಲಂಕೆಯಿಂ ಬಂದ ಹನುಮಂತನು | ೮ |

ಹರಿಗೆ ಚೂಡರತವನಿತ್ತು ಹರಿಗಳ ಕೂಡಿ

ಸರದಿಯನು ಕಟ್ಟಿ ಬಹು ರಕ್ಕಸರನು

ಒರಸಿ ರಣದಲ್ಲಿ ದಶಶಿರನ ಹುಡಿಗಟ್ಟಿ ತಾ

ಮೆರೆದ ಹನುಮಂತ ಬಲವಂತ ದೀರಾ | ೯ |

ಉರಗಬಂದಕೆ ಸಿಲುಕಿ ಕಪಿವರರು ಮೈಮರೆಯ

ತರಣಿಕುಲತಿಲಕನಾಜ್ಞೆಯ ತಾಳಿ ತಾ

ಗಿರಿಸಹಿತ ಸಂಜೀವನ ಕಿತ್ತಿ ತಂದಿತ್ತ

ಸುರನರರೊಳು ಸರಿಯುಂಟೆ ಹನುಮಂತನಿಗೆ | ೧೦ |

ವಿಜಯ ರಘುಪತಿಯೊಲಿಸಿ ಧರಣಿಸುತೆಯಳನೀತ

ಭಜಿಸಿ ಮೌಕ್ತಿಕದ ಹಾರವನು ಪಡೆದ

ಅಜಪದವಿ ರಾಮ ಕೊಡ ಬರಲು ಹನುಮಂತ

ನಿಜ ಭಕುತಿಯನೆ ಬೇಡಿ ವರವ ಪಡೆದ | ೧೧ |

ಆ ಮಾರುತನೆ ಭೀಮನೆನಿಸಿ ದ್ವಾಪರಯುಗದಿ

ಸೋಮಕುಲದಲಿ ಜನಿಸಿ ಪಾರ್ಥರೊಡನೆ

ಭೀಮ ವಿಕ್ರಮ ರಕ್ಕರಸರನು ಮುರಿದಿಕ್ಕಿದ

ಆ ಮಹಿಮ ನಮ್ಮ ಕುಲಕುರುರಾಯನು | ೧೨ |

ಕರದಿಂದ ಶಿಶುಭಾವನಾದ ಭೀಮನ ಬಿಡಲು

ಗಿರಿಯೊಡೆದು ಶತಶೃಂಗವೆಂದೆನಿಸಿತು

ಹರಿಗಳನು ಹರಿಗಳಿಂ ಕರಿಗಳನು ಕರಿಗಳಿಂ

ಅರೆದ ವೀರನಿಗೆ ಸುರನರರು ಸರೀಯೇ | ೧೩ |

ಕುರುಪ ಗರಳವನಿಕ್ಕೆ ನೆರೆಯುಂಡು ತೇಗುತಲಿ

ಉರಗಗಳ ಮೇಲ್ಪಡಲು ಆವನೊರೆಸಿದ

ಅರಗಿನ ಮನೆಯಲಿ ಉರಿಯನಿಕ್ಕಿ ತಾ ಧೀರ

ಧರಿಸಿ ಜಾಹವಿಗೊಯ್ದ ತನನುಜರ | ೧೪ |

ಅಲ್ಲಿದ್ದ ಬಕಹಿಡಂಬಕರೆಂಬ ರಕ್ಕಸರ

ನಿಲ್ಲದೊರೆಸಿದ ಲೋಕಕಂಟಕರನು

ಬಲ್ಲಿದಸುರರ ಗೆಲಿದು ದ್ರೌಪದಿಯ ಕರವಿಡಿದು

ಎಲ್ಲ ಸುಜನರಿಗೆ ಹರುಷವ ಬೀರಿದ | ೧೫ |

ರಾಜಕುಲವಜ್ರನೆನಿಸಿದ ಮಾಗಧನ ಸೀಳಿ

ರಾಜಸೂಯಯಾಗವನು ಮಾಡಿಸಿದನು

ಅಜಿಯಲಿ ಕೌರವರ ಬಲವ ಸವರುವೆನೆಂದು

ಮೂಜಗವರಿಯೆ ಕಂಕಣ ಕಟ್ಟಿದ | ೧೬ |

ಮಾನನಿಧಿ ದ್ರೌಪದಿಯ ಮನದಿಂಗಿತವನರಿದು

ದಾನವರ ಸವರಬೇಕೆಂದು ಬೇಗ

ಕಾನನವ ಪೊಕ್ಕು ಕಿರ್ಮೀರಾದಿಗಳ ತರಿದು

ಮಾನಿನಿಗೆ ಸೌಗಂಧಿಕವನಿತ್ತ | ೧೭ |

ದುರುಳ ಕೀಚಕನು ದ್ರೌಪದಿದೇವಿಚೆಲ್ವಿಕೆಗೆ

ಮರುಳಾಗಿ ಕರೆಕರೆಯ ಮಾಡಲವನ

ಗರಿಡಿಮನೆಯೊಳು ಬರೆಸಿ ಒರೆಸಿ ಅವನನುಜರ

ಕುರಪನಟ್ಟಿದ ಮಲ್ಲಕುಲವ ಸದೆದ | ೧೮ |

ವೈರಿ ದುಶ್ಯಾಸನನ ತೊಡೆಯ ಮೇಲಡ್ಡಗೆಡವಿ

ವೀರನರಹರಿಯ ಲೀಲೆಯ ತೋರಿದ

ಕೌರವರ ಬಲ ಸವರಿ ವೈರಿಗಳ ನೆಗ್ಗುತ್ತ

ಓರಂತೆ ಕೌರವರನೆಲ್ಲ ತರೆದ | ೧೯ |

ಗುರುಸುತನು ಸಂಗರದಿ ನಾರಯಣಾಸ್ತ್ರ ಬಿಡೆ

ಉರವಣಿಸಿ ಬರಲು ಶಸ್ತ್ರವ ಬಿಸುಡದೆ

ಹರಿಯ ಕೃಪಾಪಡೆದಿದ್ದ ಭೀಮಹುಂಕಾರ ಗೈದು

ಎರಗದಲೆ ದಿವ್ಯಾಸ್ತ್ರ ನೆರೆ ಅಟ್ಟಿದ | ೨೦ |

ನಾರಿರೋದನ ಕೇಳಿ ಮರಮುರುಗಿ ಗುರುಸುತನ

ಹಾರ್ಥಿಡಿದು ಶೀರೋರತ ಕಿತ್ತಿ ತೆಗೆದ

ನೀರೊಳಡಗಿದ್ದ ದುರ್ಯೋಧನನ ಹೊರಗೆಡಿಹಿ

ಊರುದ್ವಯ ತನ ಗದೆಯಿಂದ ಮುರಿದು | ೨೧ |

ಚಂಡವಿಕ್ರಮನ ಗದೆಕೊಂಡು ರಣದೊಳಗೆ ಭೂ

ಮಂಡಲದೊಳುಧ್ಭವಿಸಿದಖಿಳ ಖಳರ

ಹಿಂಡಿ ಬಿಸುಟಿದ ವೃಕೋದರನ ಪ್ರತಾಪವನು

ಕಂಡು ನಿಲ್ಲುವರಾರು ತ್ರಿಭುವನದೊಳು | ೨೨ |

ದಾನವರು ಕಲಿಯುಗದೊಳಗವತರಿಸಿ ಸುಜನರಿಗೆ

ವೇನನ ಕುಮತವ ಬೋಧಿಪುವುದನರಿತು

ಜ್ಞಾನಿ ತಾ ಪವಮಾನ ಭೂತಳದೊಳವತರಿಸಿ

ಮಾನನಿಧಿ ಮದ್ವಾಖ್ಯನೆಂದೆನಿಸಿದ | ೨೩ |

ಆರ್ಭಕತನವ ನೀಗಿ ಬದರಿಯಲಿ ಮುಧ್ವಮುನಿ

ನಿರ್ಭಯದಿ ಸಕಲಶಾಸ್ತ್ರಾರ್ಥ ಪಠಿಸಿ

ಉರ್ಬಿಯೊಳು ಆಮಾಯದ ತತ್ವಮಾರ್ಗವನು

ಸರ್ಬ ಸುಜನರಿಗೆ ಅರುಹಿದ ಮೋದದಿ | ೨೪ |

ಸರ್ವೇಶ ಹರಿ ವಿಶ್ವವೆಲ್ಲವೂ ಪುಸಿಯೆಂಬ

ದುರ್ವಾದಿಗಳ ಮತವ ನೆರೆ ಖಂಡಿಸಿ

ಸರ್ವೇಶ ಹರಿ ವಿಶ್ವಸತ್ಯವೆಂದರುಹಿದ

ಶರ್ವಾದಿಗೀರ್ವಾಣ ಸಂತತಿಯಲಿ । ೨೫ ॥

ಏಕವಿಶಂತಿ ಕುಭಾಷ್ಯಗಳ ಭೇರನು ತರಿದು

ಶ್ರೀಕರಾರ್ಚಿತನೊಲುಮೆ ಶಾಸ್ತ್ರ ರಚಿಸಿ

ಲೋಕತ್ರಯದೊಳಿದ್ದ ಸುರರು ಆಲಿಸುವಂತೆ

ಆ ಕಮಲನಾಭಯತಿನಿಕರಕೊರೆದ ॥ ೨೬ ॥

ಬದರಿಕಾಶ್ರಮಕ್ಕೆ ಪುನರಪಿ ಪೋಗಿ ವ್ಯಾಸಮುನಿ

ಪದಕೆರಗಿ ಸಕಲ ವೇದಾರ್ಥಗಳನು

ಪದುಮನಾಭನ ಮುಖದಿ ತಿಳಿದು ಬ್ರಹ್ಮತ್ವ-

ವೈದಿದ ಮಧ್ವಮುನಿರಾಯಗಭಿನಮಿಪೆನು ॥ ೨೭ ॥

ಜಯ ಜಯತು ದುರ್ವಾದಿಮತತಿಮಿರಮಾರ್ತಾಂಡ

ಜಯ ಜಯತು ವಾದಿಗಜಪಂಚಾನನ

ಜಯ ಜಯತು ಚಾರ್ವಾಕಗರ್ವಪರ್ವತಕುಲಿಶ

ಜಯ ಜಯತು ಜಗನಾಥ ಮಧ್ವನಾಥಾ ॥ ೨೮ ॥

ತುಂಗಕುಲಗುರುವರನ ಹೃತ್ಕಮಲದೊಳು ನೆಲೆಸೆ

ಭಂಗವಿರದ ಸುಖವ ಸುಜನಕೆಲ್ಲ

ಹಿಂಗದೆ ಕೊಡುವ ಗುರುಮಧ್ವಾಂತರ್ಯಾಮಿ

ಶ್ರೀರಂಗವಿಠಲನೆಂದು ನೆರೆನಂಬಿರೋ ॥ ೨೯ ॥

ಸೋಮಸೂರ್ಯಪರಾಗದಿ ಗೋಸಹಸ್ರಗಳ

ಭೂಮಿದೇವರಿಗೆ ಸುರನದಿಯ ತಟದಿ

ಶ್ರೀಮುಕುಂದರ್ಪಣವೆನುತ ಕೊಟ್ಟ ಫಲವಕ್ಕು

ಈ ಮಧ್ವನಾಮ ಬರೆದೋದಿದವರಿಗೆ ॥ ೩೦ ॥

ಪುತ್ರರಿಲ್ಲದವರು ಸತ್ಪುತ್ರರೈದುವರು ಸ-

ರ್ವತ್ರದಲಿ ದಿಗ್ವಿಜಯವಾಹುದು ಸದಾ

ಶತ್ರುಗಳು ಬೀಳ್ವರಪಮೃತ್ಯು ಬರಲಂಜುವರು

ಸೂತ್ರನಾಮಕನ ಸಂಸ್ಕೃತಿ ಮಾತ್ರದಿ ॥ ೩೧ ॥

ಶ್ರೀಪಾದರಾಜರುಸುರಿದ ಮಧ್ವನಾಮ ಸಂ-

ತಾಪವನು ಕಳೆದು ಸೌಖ್ಯವನೀವುದು

ಶ್ರೀಪತಿ ಜಗನಾಥವಿಠಲನ ತೋರಿ ಭವಾ-

ಕೂಪದಿಂದ ಕಡೆಹಾಯಿಸುವುದು ॥ ೩೨ ॥

"Telugu Transliteration" | "Tamil Transliteration" |
"Sanskrit Transliteration"

"ja" Index | First Line Songs Index

Home